ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—ಅಡ್ವಾನ್ಸ್ ಕೊಡದೆ ಕೊಡುವುದು ಪದ್ಧತಿಯಲ್ಲದೆಯೆ? ಅಡ್ವಾನ್ಸ್ ಹಣ ಕೊಡದಿದ್ದರೆ ಕೊಡಕೂಡದು ಎಂದು ನಿಗದಿ ಮಾಡಿರುವುದರಿಂದ, ನಮ್ಮಲ್ಲಿ ಕೆಲವು ಬುಲ್‌ಡೋಜರುಗಳು ಕೆಲಸ ವಿಲ್ಲದೆ, ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವು ಕಡೆ ಕೆಲಸವಿಲ್ಲದೇ ಇರುವುದು ಗಮನಕ್ಕೆ ಬಂದಿದೆ.

ಶ್ರೀ ಬಿ. ಹುಚ್ಚೇಗೌಡರು.—ಕೆಲಸವಿಲ್ಲದೆ ಕೆಲವು ಕಡೆ ನಿಂತಿರುವುದಕ್ಕೆ ಹಣ ಬಾಕಿಯಿರುವುದು ಕಾರಣವೋ ಅಥವಾ ಬೇರೆ ಏನಾದರೂ ಕಾರಣ ವಿದೆಯೋ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವು ಕಡೆ ಕೆಲಸವಿಲ್ಲ. ಸರಿಯಾದ ರೀತಿಯಲ್ಲಿ ಕೆಲಸ ಮಾಡಿಸಬೇಕೆಂಬ ಪ್ರಯತ್ನವಿದೆ.

State Transport Authority.

Q.—379. **Sri NARAYANAPPA** (Chintamani—Scheduled Castes).—

Will the Government be pleased to state:—

(*a*) when the Central Traffic Board was established in the State;

(*b*) the number of members in this Board;

(*c*) out of this, the number of Depressed Class members?

A.—**Sri H. SIDDAVEERAPPA** (Minister for Home Affairs and Agriculture).—

(*a*) On 8th May 1952. It is called "the State Transport Authority".

(*b*) Eleven.

(*c*) One.

ಶ್ರೀ ನಾರಾಯಣಪ್ಪನವರು.—ಸೆಂಟ್ರಲ್ ಟ್ರಾಫಿಕ್ ಬೋರ್ಡು ಸ್ಥಾಪನೆಯಾಗಿರುವುದು ಯಾವಾಗ ಎಂದು ಕೇಳಿರುವುದಕ್ಕೆ ತಾರೀಖು ಕೊಟ್ಟಿದೆ. ಅದರ ಸದಸ್ಯರೆಷ್ಟು ಎಂದು ಕೇಳಿರುವುದಕ್ಕೆ 11 ಜನ ಎಂದು ಹೇಳಿದೆ?

ಅಧ್ಯಕ್ಷರು.—ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ಓದುವುದು ಅನಾವಶ್ಯಕ, ಬೇರೆ ಪ್ರಶ್ನೆ ಏನಾದರೂ ಇದ್ದರೆ ಕೇಳಿ.

ಶ್ರೀ ಎ. ಮುನಿಯಪ್ಪನವರು (ಶಿಡ್ಲಘಟ್ಟ—ಚಿಕ್ಕಬಳ್ಳಾಪುರ—ಅನುಸೂಚಿತ ಜಾತಿಗಳು).—ಹೆಸರುಗಳನ್ನು ದಯವಿಟ್ಟು ತಿಳಿಸುತ್ತೀರಾ?

Sri A. G. RAMACHANDRA RAO.—The names have been published in the *Mysore Gazette*, dated 8th May 1952. If the Hon'ble Member wants it, I will place it on the table of the House.

ಶ್ರೀ ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲುಪೇಟೆ—ಹೆಗ್ಗಡದೇವನಕೋಟೆ).—ಹಿಂದೆ ಇದ್ದ ಟ್ರಾಫಿಕ್ ಬೋರ್ಡಿಗೆ ಬಂದಿದ್ದ ತಕರಾರು ಅರ್ಜಿಗಳನ್ನು ಆ ಬೋರ್ಡಿನವರೇ ತೀರ್ಮಾನ ಮಾಡಬೇಕೇ ಅಥವಾ ಮಂತ್ರಿಗಳು ತೀರ್ಮಾನಮಾಡುತ್ತಾರೋ?

Mr. SPEAKER.—That does not arise.

Sri Mulka GOVINDA REDDY (Chitaldrug).—Sir, I may be permitted to put question No. 194 on behalf of Janab Imam.

Sri A. BHEEMAPPA NAIK (Molakalmuru).—Written permission of the Member who has given notice of the question is necessary.

Sri Mulka GOVINDA REDDY.—Such permission is not necessary in respect of a question. It is only in respect of a resolution, it may be necessary.

Mr. SPEAKER.—It is not very clear. But the practice seems to be that written authority is necessary, and that is why Sri Vasan had authorised Sri Srinivasa Iyengar to put a previous question But I have no objection to allow this one question to be put by you as a special case.

Sri B. HUTCHE GOWDA (Turuvekere).—Even without written authority the Speaker can allow.

Mr. SPEAKER.—It is always better that such things are in writing.

Delay in convening the Legislative Assembly meeting.

Q.—194. **Sri Mulka GOVINDA REDDY** (Chitaldrug) [on behalf of Janab J. Mohamed Imam (Jagalur)].—

Will the Government be pleased to state:—

the reasons for the delay in convening the meeting of the Legislative Assembly?

A.—**Sri A. G. RAMACHANDRA RAO** (Minister for Law and Education).—

There has been no delay. As contemplated by the Constitution of India, the Legislative Assembly and the Legislative Council were summoned immediately after both the Houses were duly constituted under the provisions of the Constitution.

Sri Mulka GOVINDA REDDY.—General elections to the Legislative Assembly were over by 25th January this year. Is it not?